ಅಸಲು ದಾವೆ ನಂಃ 73/2021 ಪಿ. ಡಬ್ಲ್ಯೂಃ 1- ಶಾಂತವ್ವ ಶಿವಪ್ಪ ತಳವಾರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 25-03-2026 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.ಎಂ.ಎಸ್. ಹೆಚ್. ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಗಂಡ ತಾನು ಜೀವಂತ ಇರುವ ಕಾಲಕ್ಕೆ ನಾನು ವಾಸವಿರುವ ಮನೆ ನಂ.530/ಬಿ ನೇದ್ದನ್ನು ಹಕ್ಕು ಬಿಟ್ಟು ಪತ್ರದ ಮೂಲಕ ಬಿಟ್ಟುಕೊಟ್ಟಿದ್ದಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪರಸಪ್ಪ ಸಂಬಂದ ಇರುವುದಿಲ್ಲ, ನನ್ನ ಗಂಡ ಬಿಟ್ಟುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಶಿವಪ್ಪ ತಂದೆ ಪರಸಪ್ಪ ತಳವಾರ ಎನ್ನುವವರು ನಮ್ಮ ಊರಿನಲ್ಲಿ 5-6 ಜನರು ಇದ್ದಾರೆ. ಆ ರೀತಿ 5-6 ಜನರು ಹೆಸರುಗಳ ಕುರಿತು ದಾಖಲಾತಿ ಹಾಜರುಪಡಿಸಿಲ್ಲ. ಶಿವಪ್ಪ ತಂದೆ ಪರಸಪ್ಪ ತಳವಾರ ಎನ್ನುವ ಹೆಸರು ನನ್ನ ಗಂಡನ ಪೂರ್ಣ ಹೆಸರು ಎಂದರೆ ಸಾಕ್ಷಿಯು ನನ್ನ ಗಂಡನ ಹೆಸರು ಶಿವಪ್ಪ ಹನಮಪ್ಪ ತಳವಾರ ಎಂದು ನುಡಿಯುತ್ತಾರೆ. ದಿಃ 10-08-2018 ರಂದು ಶಿವಪ್ಪ ತಂದೆ ಪರಸಪ್ಪ ತಳವಾರ ಮತ್ತು ಶಿವಪ್ಪ ಹನಮಪ್ಪ ತಳವಾರ ರವರ ಹೆಸರಿನಲ್ಲಿ 2 ಮರಣ ಉತಾರೆ ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವನ ಹೆಸರು ಪರಸಪ್ಪ ಎಂದು ಗೊತ್ತಿದ್ದರು ಸಹ ಹನಮಪ್ಪ ರವರ ಹೆಸರನ್ನು ಎತ್ತಿಹಾಕಲು ಖೊಟ್ಟಿ ವಾರಸ ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಿಃ 16-02-2024 ರಂದು ಅರ್ಜಿಯನ್ನು ನೀಡಿದ್ದರಿಂದ ದಿಃ 24-05-2024 ರಂದು ತಹಶಿಲ್ದಾರ ರವರು ಪಂಚರ ಸಮಕ್ಷಮ ಸ್ತಾನಿಕ ಚೌಕಾಶಿ ಮಾಡಿ ನಾವು ಹನಮಪ್ಪನ ವಾರಸುದಾರರು ಅಲ್ಲ ಎಂದು ವರದಿ ನೀಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನಮಗೂ ಯಾವುದೇ ರೀತಿಯಿಂದ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿ ಒಬ್ಬನೆ ಕಾಯಿದೆ ಬದ್ಧ ಮಾಲಕ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ,

Sd/-

(ಹುಲುಗಪ್ಪ ಡಿ)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ
(ಪೀಠಾಸಿನ ಗಜೇಂದ್ರಗಡ)